## ಹರಿಕಥಾಮೃತಸಾರ - ೦೮

## ಮಾತೃಕಾ ಸಂಧಿ

ಹರಿಕಥಾಮೃತಸಾರ ಗುರುಗಳ | ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಪಾದಮಾನಿ ಜಯಂತನೊಳಗೆ ಸು|ಮೇಧನಾಮಕನಿಪ್ಪ ದಕ್ಷಿಣ |
ಪಾದದಂಗುಟದಲ್ಲಿ ಪವನನು ಭಾರ್ಭೃದ್ರೂಪ ||
ಕಾದುಕೊಂಡಿಹ ಟಂಕಿ ತರ ಮೊದ|ಲಾದ ನಾಮದಿ ಸಂಧಿಗಳಲೀ |
ರೈದುರೂಪದಲಿದ್ದು ಸಂತತನಡೆದು ನಡೆಸುತಲಿ || ||೦೮-೦೧||

ಕಪಿಲ ಚಾರ್ವಾಂಗಾದಿ ರೂಪದಿ | ವಪುಗಳೊಳು ಹಸ್ತಗಳ ಸಂಧಿಯೊ |
ಳಪರಿಮಿತ ಕರ್ಮಗಳ ಮಾಡುತಲಿಪ್ಪ ದಿನದಿನದಿ ||
ಕೃಪಣವತ್ಸಲ ಪಾರ್ಶ್ವದೊಳು ಪರ|ಸುಫಲಿಯೆನಿಸುವ ಗುದ ಉಪಸ್ಥದಿ |
ವಿಪುಲಬಲಿಭಗಮನವೆನಿಸಿತುಂದಿಯೊಳಗಿರುತಿಹನು || ||೦೮-೦೨||

ಐದು ಮೇಲೊಂದಧಿಕ ದಳವುಳ್ಳೈದು ಪದ್ಮವು ನಾಭಿಮೂಲದಿ |
ಐದು ಮೂರ್ತಿಗಳಿಹವು ಅನಿರುದ್ಧಾದಿ ನಾಮದಲಿ ||
ಐದಿಸುತ ಗರ್ಭವನು ಜೀವರ|ನಾದಿಕರ್ಮಪ್ರಕೃತಿಗುಣಗಳ |
ಹಾದಿ ತಪ್ಪಲಿಗೊಡದೆ ವ್ಯಾಪಾರಗಳ ಮಾಡುತಿಹ || ||೦೮-೦೩||

ನಾಭಿಯಲಿ ಷಟ್ಕೋಣಮಂಡಲ|ದೀ ಭವಿಷ್ಯದ್ ಬ್ರಹ್ಮನೊಳು ಮು |
ಕ್ತಾಭ ಶ್ರೀ ಪ್ರದ್ಯುಮ್ನನಿಪ್ಪನು ವಿಬುಧಗಣಸೇವ್ಯ ||
ಶೋಭಿಸುತ ಕೌಸ್ತುಭವೆ ಮೊದಲಾ|ದಾಭರಣಆಯುಧಗಳಿಂದ ಮ |
ಹಾಭಯಂಕರ ಪಾಪಪುರುಷನ ಶೋಷಿಸುತ ನಿತ್ಯ || ||೦೮-೦೪||

ದ್ವಾದಶಾರ್ಕರ ಮಂಡಲವು ಮ|ಧ್ಯೋದರದೊಳು ಸುಷುಮ್ನದೊಳಗಿಹು |
ದ್ವೈದು ರೂಪಾತ್ಮಕನು ಅರವತ್ತಧಿಕ ಮುನ್ನೂರು ||
ಈ ದಿವಾ ರಾತ್ರಿಗಳ ಮಾನಿಗ|ಳಾದ ದಿವಿಜರ ಸಂತಯಿಸುತ ನಿ |
ಷಾದ ರೂಪಕ ದೈತ್ಯರನು ಸಂಹರಿಪ ನಿತ್ಯದಲಿ || ||೦೮-೦೫||

ಹೃದಯದೊಳಗಿಹುದಷ್ಟದಳ ಕಮ|ಲದರೊಳಗೆ ಪ್ರಾದೇಶನಾಮಕ |
ನುದಿತ ಭಾಸ್ಕರನಂತೆ ತೋರ್ಪನು ಬಿಂಬನೆಂದೆನಿಸಿ ||
ಪದುಮ ಚಕ್ರ ಸುಶಂಖ ಸುಗದಾಂ|ಗದ ಕಟಕ ಮುಕುಟಾಂಗುಳೀಯಕ |
ಪದಕ ಕೌಸ್ತುಭ ಹಾರ ಗ್ರೈವೇಯಾದಿಭೂಷಿತನು || ||೦೮-೦೬||

ದ್ವಿದಳ ಪದ್ಮವು ಶೋಭಿಪುದು ಕಂಠದಲಿ ಮುಖ್ಯಪ್ರಾಣ ತನ್ನಯ ।
ಸುದತಿಯಿಂದೊಡಗೂಡಿ ಹಂಸೋಪಾಸನೆಯ ಮಾಳ್ಪ ॥
ಉದಕವನ್ನಾದಿಗಳಿಗವಕಾಶದನು ತಾನಾಗಿದ್ದುದಾನಾ ।
ಭಿಧನು ಶಬ್ದವ ನುಡಿದು ನುಡಿಸುವ ಸರ್ವಜೀವರೊಳು ॥ ॥೦೮-೦೭ ॥

ನಾಸಿಕದಿ ನಾಸತ್ಯದಸ್ರರುಶ್ವಾಸಮಾನಿ ಪ್ರಾಣಭಾರತಿ ।
ಹಂಸ ಧನ್ವಂತ್ರಿಗಳು ಅಲ್ಲಲ್ಲಿಪ್ಪರವರೊಳಗೆ ॥
ಭೇಶ ಭಾಸ್ಕರರಕ್ಷಿಯುಗಳಕಧೀಶರೆನಿಪರು ಅವರೊಳಗೆ ಲ ।
ಕ್ಷ್ಮೀಶದಧಿವಾಮನರು ನಿಯಾಮಿಸುತಲಿರುತಿಹರು ॥ ॥೦೮-೦೮॥

ಸ್ತಂಭರೂಪದಲಿಪ್ಪ ದಕ್ಷಿಣ । ಅಂಬಕದಿ ಪ್ರದ್ಯುಮ್ನ ಗುಣರೂ ।
ಪಾಂಭೃಣಿಯು ತಾನಾಗಿ ಇಪ್ಪಳು ವತ್ಸರೂಪದಲಿ ॥
ಪೊಂಬಸಿರಪದಯೋಗ್ಯ ಪವನ ತ್ರಿಯಂಬಕಾದಿ ಸಮಸ್ತ ದಿವಿಜಕ ।
ದಂಬಸೇವಿತನಾಗಿ ಸರ್ವಪದಾರ್ಥಗಳ ತೋರ್ಪ ॥ ॥೦೮-೦೯॥

ನೇತ್ರಗಳಲಿ ವಸಿಷ್ಠ ವಿಶ್ವಾಮಿತ್ರ ಭರದ್ವಾಜ ಗೌತಮ ।
ನತ್ರಿಅ ಜಮದಗ್ನಿ ನಾಮಗಳಿಂದ ಕರೆಸುತಲಿ ॥
ಪತ್ರತಾಪಕ ಶಕ್ರ ಸೂರ್ಯ ಧರಿತ್ರಿ ಪರ್ಜನ್ಯಾದಿ ಸುರರು ಜ ।
ಗತ್ರಯೇಶನ ಭಜಿಪರನುದಿನ ಪರಮಭಕುತಿಯಲಿ ॥ ॥೦೮-೧೦॥

ಜ್ಯೋತಿಯೊಳಗಿಪ್ಪನು ಕಪಿಲ ಪುರುಹೂತಮುಖದಿಕ್ಪತಿಗಳಿಂದ ಸ ।
ಮೇತನಾಗಿಹ ದಕ್ಷಿಣಾಕ್ಷಿಯ ಮುಖದೊಳಿಹ ವಿಶ್ವ ।
ಶ್ವೇತವರ್ಣ ಚತುರ್ಭುಜನು ಸಂಪ್ರೀತಿಯಿಂದಲಿ ಸ್ಥೂಲ ವಿಷಯವ ।
ಚೇತನರಿಗುಂಡುಣಿಪ ಜಾಗ್ರತೀಯಿತ್ತು ನೃಗಜಾಸ್ಯ ॥ ॥೦೮-೧೧॥

ನೆಲೆಸಿಹರು ದಿಗ್ದೇವತೆಗಳಿಕ್ಕೆಲದಿ ಕರ್ಣಂಗಳಲಿ ತೀರ್ಥಂ ।
ಗಳಿಗೆ ಮಾನಿಗಳಾದ ಸುರನದಿಮುಖ್ಯ ನಿರ್ಜರರು ॥
ಬಲದ ಕಿವಿಯಲಿ ಇರುತಿಹರು ಬಾಂಬೊಳೆಯ ಜನಕ ತ್ರಿವಿಕ್ರಮನು ನಿ ।
ರ್ಮಲಿನರನು ಮಾಡುವನು ಈ ಪರಿ ಚಿಂತಿಸುವ ಜನರ ॥ ॥೦೮-೧೨॥

ಚಿತ್ತಜೇಂದ್ರರು ಮನದೊಳಿಪ್ಪರು । ಕೃತ್ತಿವಾಸನು ಅಹಂಕಾರದಿ ।
ಚಿತ್ತಚೇತನಮಾನಿಗಳು ವಿಹಗೇಂದ್ರ ಫಣಿಪರೊಳು ।
ನಿತ್ಯದಲಿ ನೆಲೆಗೊಂಡು ಹತ್ತೊಂಭತ್ತುಮೊಗ ತೈಜಸನು ಸ್ವಪ್ನಾ ।
ವಸ್ಥೆಯೈದಿಸಿ ಜೀವರನು ಪ್ರವಿವಿಕ್ತಭುಕುವೆನಿಪ ॥ ॥೦೮-೧೩॥

ಜ್ಞಾನಮಯ ತೈಜಸನು ಹೃದಯ|ಸ್ಥಾನವೈದಿಸಿ ಪ್ರಾಜ್ಞನೆಂಬಭಿ |
ಧಾನದಿಂ ಕರೆಸುತ್ತ ಚಿತ್ಸುಖವ್ಯಕ್ತಿಯನೆ ಕೊಡುತ |
ಆನತೇಷ್ಟಪ್ರದನು ಅನುಸಂ|ಧಾನವೀಯದೇ ಸುಪ್ತಿಯೈದಿಸಿ |
ತಾನೆ ಪುನರಪಿ ಸ್ವಪ್ನ ಜಾಗ್ರತೀ ಈವ ಚೇತನಕೆ || ||೦೮-೧೪||

ನಾಲಿಗೆಯೊಳಿಹ ವರುಣ ಮತ್ಸ್ಯಣು | ನಾಲಿಗೆಯೊಳು ಉಪೇಂದ್ರರಿಂದ್ರರು |
ತಾಲು ಪರ್ಜನ್ಯಾಖ್ಯ ಸೂರ್ಯನು ಅರ್ಧಗರ್ಭನಿಹ ||
ಆಲಿಯೊಳು ವಾಮನ ಸುಭಾಮನ | ಫಾಲದೊಳು ಶಿವಕೇಶವನು ಸುಕ |
ಪೋಲದೊಳಗೆ ರತೀಶಕಾಮನು ಅಲ್ಲೇ ಪ್ರದ್ಯುಮ್ನ || ||೦೮-೧೫||

ರೋಮಗಳಲಿ ವಸಂತ ತ್ರಿಕಕುಬ್|ದ್ಧಾಮ ಮುಖದೊಳಗಗ್ನಿ ಭಾರ್ಗವ |
ತಾಮರಸಭವ ವಾಸುದೇವರು ಮಸ್ತಕದೊಳಿಹರು ||
ಈ ಮನದೊಳಿಹ ವಿಷ್ಣು ಶಿಖದೊಳು | ಮಾಮಹೇಶ್ವರ ನಾರಸಿಂಹ |
ಸ್ವಾಮಿ ತನ್ನನುದಿನದಿ ನೆನೆವರಪ ಮೃತ್ಯು ಪರಿಹರಿಪ || ||೦೮-೧೬||

ಮೌಳಿಯಲ್ಲಿಹ ವಾಸುದೇವನು | ಏಳಧಿಕನವಜಾದಿ ರೂಪವ |
ತಾಳಿ ಮುಖದೊಳು ನಯನಶ್ರವಣಾದ್ಯವಯವಗಳಲ್ಲಿ ||
ಆಳರಸು ತಾನಾಗಿ ಸತತ ಸು|ಲೀಲೆಗೈಯುತಲಿಪ್ಪ ಸುಖಮಯ |
ಕೇಳಿಕೇಳಿಸಿ ನೋಡಿ ನೋಡಿಸಿ ನುಡಿದು ನುಡಿಸುವನು || ||೦೮-೧೭||

ಎರಡಧಿಕಎಪ್ಪತ್ತೆನಿಪ ಸಾ|ವಿರದ ನಾಡಿಗೆ ಮುಖ್ಯವೇಕೋ |
ತ್ತರ ಶತಗಳಲ್ಲಿಹವು ನೂರಾ ಒಂದು ಮೂರ್ತಿಗಳು ||
ಅರಿತು ದೇಹದಿ ಕಲಶನಾಮಕ|ಹರಿಗೇ ಕಳೆಗಳೆಂದು ನೈರಂ |
ತರದಿ ಪೂಜಿಸುತಿಹರು ಪರಮಾದರದಿ ಭೂಸುರರು || ||೦೮-೧೮||

ಇದಕೆ ಕಾರಣವೆನಿಸುವುವು ಎರ|ಡಧಿಕ ದಶನಾಡಿಗಳೊಳಗೆ ಸುರ |
ನದಿಯೇ ಮೊದಲಾದಖಿಳ ತೀರ್ಥಗಳಿಹವು ಕರಣದಲಿ |
ಪದುಮನಾಭನು ಕೇಶವಾದಿ|ದ್ವಿದಶರೂಪದಲಿಪ್ಪನಲ್ಲತಿ |
ಮೃದುಳವಾದ ಸುಷುಮ್ನದೊಳಗೇಕಾತ್ಮನೆನಿಸುವನು || ||೦೮-೧೯||

ಆಮ್ನಯಪ್ರತಿಪಾದ್ಯ ಶ್ರೀ ಪ್ರದ್ಯುಮ್ನದೇವನು ದೇಹದೊಳಗೆ ಸು |
ಷುಮ್ನದೀಡಾ ಪಿಂಗಳದಿ ವಿಶ್ವಾದಿ ರೂಪದಲಿ |
ನಿರ್ಮಲಾತ್ಮನು ವಾಣಿ ವಾಯು ಚ|ತುರ್ಮುಖರೊಳಿದ್ದಖಿಳ ಜೀವರ |
ಕರ್ಮಗುಣವನುಸರಿಸಿ ನಡೆವನು ವಿಶ್ವವ್ಯಾಪಕನು || ||೦೮-೨೦||

ಅಬ್ದಯನ ಋತು ಮಾಸ ಪಕ್ಷ ಸುಶಬ್ದದಿಂದಲಿ ಕರೆಸುತಲಿ ನೀ |
ಲಾಬ್ದವರ್ಣಾನಿರುದ್ಧ ಮೊದಲಾದೈದು ರೂಪದಲಿ |
ಹಬ್ಬಿಹನು ಸರ್ವತ್ರದಲಿ ಕರುಣಾಬ್ಧಿ ನಾಲ್ವತ್ತೈದು ರೂಪದಿ |
ಲಬ್ಧನಾಗುವನೀ ಪರಿ ಧೇನಿಸುವ ಭಕುತರಿಗೆ || ||೦೮-೧೦||

ಐದು ರೂಪಾತ್ಮಕನು ಇಪ್ಪತ್ತೈದು ರೂಪದಿಲಿಪ್ಪ ಮತ್ತಹದ |
ನೈದು ತಿಥಿ ಇಪ್ಪತ್ತುನಾಲಕರಿಂದ ಪೆಚ್ಚಿಸಲು ||
ಐದುವುದು ಆರವತ್ತಧಿಕ ಆರ್ನೈದು ದಿವಸಾಹ್ವಯನೋಳಗೆ ಮನ |
ತೊಯ್ದವಗೆ ತಾಪತ್ರಯದ ಮಹದೋಷವೆಲ್ಲಿಹದು || ||೦೮-೧೧||

ದಿವಸ ಯಾಮ ಮುಹೂರ್ತ ಘಟಿಕಾದ್ಯವಯವಗಳೊಳಗಿದ್ದು ಗಂಗಾ |
ಪ್ರವಹದಂದದಿ ಕಾಲನಾಮಕ ಪ್ರವಹಿಸುತಲಿಪ್ಪ ||
ಇವನ ಗುಣರೂಪ ಕ್ರಿಯಂಗಳನಿವಹದೋಳು ಮುಳುಗಾಡುತಲಿ ಭಾ |
ಗವಿ ಸದಾನಂದಾತ್ಮಳಾಗಿಹಳೆಲ್ಲ ಕಾಲದಲಿ || ||೦೮-೧೨||

ವೇದತತಿಗಳ ಮಾನಿ ಲಕ್ಷ್ಮೀ ಧರಾಧರನ ಗುಣರೂಪಕ್ರಿಯೆಗ |
ಳಾದಿಮಧ್ಯಾಂತವನು ಕಾಣದೆ ಮನದಿ ಯೋಚಿಸುತ ||
ಆದಪೆನೆ ಈತನಿಗೆ ಪತ್ನಿ ಕೃಪೋದಧಿಯು ಸ್ವೀಕರಿಸಿದನು ಲೋ |
ಕಾಧಿಪನು ಭಿಕ್ಷುಕನ ಮನೆಯೌತಣವ ಕೊಂಬಂತೆ || ||೦೮-೧೩||

ಕೋವಿದರು ಚಿತ್ತೈಸುವುದು ಶ್ರೀದೇವಿಯೊಳಗಿಹ ನಿಖಿಲಗುಣ ತೃಣ |
ಜೀವರಲಿ ಕಲ್ಪಿಸಿ ಯುಕುತಿಯಲಿ ಮತ್ತು ಕ್ರಮದಿಂದ |
ದೇವದೇವಕಿಯಿಪ್ಪಳೆಂದರಿದಾ ವಿರಿಂಚನ ಜನನಿ ಈತನ |
ಆವ ಕಾಲದಲರಿಯಳಂತವ ನರರ ಪಾಡೇನು || ||೦೮-೧೪||

ಕ್ಷೀರ ದಧಿ ನವನೀತ ಘೃತದೊಳು ಸೌರಭರಸಾಹಯನೇನಿಸಿ ಶಾಂ |
ತೀರಮಣ ಜ್ಞಾನಕ್ರಿಯೆಚ್ಛಾಶಕ್ತಿಯೆಂದೆಂಬ ||
ಈರೆರಡು ನಾಮದಲಿ ಕರೆಸುವ | ಭಾರತೀ ವಾಗ್ದೇವಿ ವಾಯು ಸ |
ರೋರುಹಾಸನರಲ್ಲಿ ನೆಲಸಿಹರೆಲ್ಲ ಕಾಲದಲಿ || ||೦೮-೧೫||

ವಸುಗಳೆಂಟು ನವಪ್ರಜೇಶರು ಶ್ವಸನಗಣವೈವತ್ತು ಏಕಾ |
ದಶ ದಿವಾಕರರನಿತು ರುದ್ರರು ಅಶ್ವಿನಿಗಳೆರಡು ||
ದಶವಿಹೀನ ಶತಾಖ್ಯ ಈ ಸುಮನಸರೊಳಗೆ ಚತುರಾತ್ಮ ನೀಯಾ |
ಮಿಸುವ ಬ್ರಹ್ಮಸಮೀರಖಗಪಫಣೀಂದ್ರರೊಳಗಿದ್ದು || ||೦೮-೧೬||

ತೋರುತಿಪ್ಪನು ಚಕ್ರದಲಿ ಹಿಂಕಾರನಾಮಕ ಶಂಖದಲಿ ಪ್ರತಿ |
ಹಾರ ಗದೆಯಲಿ ನಿಧನ ಪದ್ಮದಲಿಪ್ಪ ಪ್ರಸ್ತಾವ |
ಕಾರುಣಿಕನುದ್ಗೀಥ ನಾಮದಿ | ಮಾರಮಣನೈರೂಪಗಳ ಶಂ |
ಖಾರಿಮೊದಲಾದಾಯುಧಗಳೊಳು ಸ್ಮರಿಸಿ ಧರಿಸುತಿರು || ||೦೮-೨೮||

ತನುವೆ ರಥ ವಾಗಭಿಮಾನಿಯೆ | ಗುಣವೆನಿಸುವಳು ಶ್ರೋತ್ರದಲಿ ರೋ |
ಹಿಣಿ ಶಶಾಂಕರು ಪಾಶಪಾಣಿಗಳಶ್ವವೆಂದೆನಿಸಿ |
ಇನನು ಸಂಜ್ಞಾದೇವಿಯರು ಇಹಾರನಲಲೋಚನ ಸೂತನೆನಿಸುವ |
ಪ್ರಣವಪಾದ್ಯ ಪ್ರಾಣನಾಮಕ ರಥಿಕನೆನಿಸುವನು || ||೦೮-೨೯||

ಅಮಿತಮಹಿಮನಪಾರಗುಣಗಳ | ಸಮಿತವರ್ಣಾತ್ಮಕ ಶ್ರುತಿ ಸ್ಮೃತಿ |
ಗಮಿಸಲಾಪವೆ ತದಭಿಮಾನಿಗಳೆಂದೆನಿಸಿಕೊಂಬ ||
ಕಮಲಸಂಭವ ಭವ ಸುರೇಂದ್ರಾದ್ಯಮರರನುದಿನ ತಿಳಿಯಲರಿಯರು |
ಸ್ವಮಹಿಮೆಗಳಾದ್ಯಂತಮಧ್ಯಗಳರಿವ ಸರ್ವಜ್ಞ || ||೦೮-೩೦||

ವಿತ್ತ ದೇಹಾಗಾರ ದಾರಾಪತ್ಯ ಮಿತ್ರಾದಿಗಳೊಳಗೆ ಹರಿ |
ಪ್ರತ್ಯಗಾತ್ಮನು ಎಂದೆನಿಸಿ ನೆಲೆಸಿಪ್ಪನೆಂದರಿದು ||
ನಿತ್ಯದಲಿ ಸಂತೃಪ್ತಿ ಪಡಿಸುತ | ಉತ್ತಮಾಧಮಮಧ್ಯಮರ ಕೃತ |
ಕೃತ್ಯನಾಗುನ್ಮತ್ತನಾಗದೆ ಭೃತ್ಯ ನಾನೆಂದು || ||೦೮-೩೧||

ದೇವದೇವೇಶನ ಸುಮೂರ್ತಿ ಕಳೇವರಗಳೊಳಗನವರತ ಸಂ |
ಭಾವಿಸುತ ಪೂಜಿಸುತ ನೋಡುತ ಸುಖಿಸುತಿರು ಬಿಡದೆ ||
ಶ್ರೀವರ ಜಗನ್ನಾಥವಿಠಲನು | ತಾ ಒಲಿದು ಕಾರುಣ್ಯದಲಿ ಭವ |
ನೋವು ಪರಿಹರಿಸುವನು ಪ್ರವಿತತ ಪತಿತಪಾವನನು || ||೦೮-೩೨||

ooooooooooooooooooooooooooooooooooooo